# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 160ರಲ್ಲಿ ದಿನಾಂಕ:28.07.2021 ರಂದು, ನಡೆದ ವಾರ್ಡ್ DETER ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 28.07.2021 ರಂದು ವಾರ್ಡ್ ಸಂಖ್ಯೆ 160ರ ಜುಲೈ ಮಾಹೆಯ ಎರಡನೇ **ವಾರ್ಡ್ DETER** ಸಮಿತಿಯ ZOOM Meeting ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರುಗಳು ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

- ಶ್ರೀಮತಿ ಸವಿತಾ, 5ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, , 1ನೇ ಫೇಸ್, ಬಿಇಎಂಎಲ್ 5ನೇ ಹಂತ ವಿಳಾಸದ ನಿವಾಸಿ ಯವರು ಈ ಕೆಳಕಂಡ ದೂರುಗಳನ್ನು ಸಲ್ಲಿಸಿದರು.
  1. ಪ್ಲಾಸ್ಟಿಕ್ ಬಳಕೆಗೆ ನಿರ್ಬಂಧವಿದ್ದರೂ ಹಲವು ಕಡೆ ಬಳಕೆಯಾಗುತ್ತಿರುವುದು ಕಂಡು ಬಂದಿದ್ದು, ಸೂಕ್ತ ಕ್ರಮವಹಿಸುವಂತೆ ಕೋರಿದರು.
  2. ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ, ಆಟೋ ಟಿಪ್ಪರ್ ಗಳ ಸಂಖ್ಯೆ ಹೆಚ್ಚಿಸಿದ್ದರೂ ಎರಡು ದಿನಗಳಗೊಮ್ಮೆ ಕಸ ಸಂಗ್ರಹಿಸಲು ಗಾಡಿಗಳು ಬರುತ್ತಿವೆಯೆಂದು ದೂರು ನೀಡಿದರು.
  3. ಮಳೆಯಿಂದಾಗಿ ತಮ್ಮ ಪ್ರದೇಶದ ಸುತ್ತಮುತ್ತ ಹೊಸದಾಗಿ ಡಾಂಬರೀಕರಣಗೊಂಡಿರುವ ರಸ್ತೆಗಳಲ್ಲಿ, ರಸ್ತೆಯ ಮೇಲ್ಪದರ ಕಿತ್ತು ಬರುತ್ತಿರುವುದಾಗಿ ದೂರು ನೀಡಿದರು.
  4. ಕೆಂಪೇಗೌಡ ಜೋಡಿ ರಸ್ತೆಯಲ್ಲಿ ಚರಂಡಿಯಲ್ಲಿ ತುಂಬಿಕೊಂಡಿರುವ ಹೂಳನ್ನು ತೆರವುಗೊಳಿಸಲು ಕೋರಿದರು.
  5. ತಮ್ಮ ಪ್ರದೇಶದಲ್ಲಿ ಬೀದಿ ಬದಿ ವಿದ್ಯುತ್ ಪೋಲ್ ಅಳವಡಿಸಿಕೊಡಲು ಕೋರಿದರು.
  6. ಬೆಸ್ಕಾಂ ವತಿಯಿಂದ ಮರಕ್ಕೆ ತಗುಲುವ ಸಂಭವವಿರುವ ಮರದ ರೆಂಬೆಗಳನ್ನು ತೆರವುಗೊಳಿಸಿದ ನಂತರ ಸರಿಯಾಗಿ ವಿಲೇವಾರಿ ಮಾಡದೇ ಅಲ್ಲಿಯೇ ಬಿಟ್ಟು ಹೋಗುತ್ತಿರುವುದಾಗಿ ದೂರು ನೀಡಿದರು.
  7. **18** ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆ 2ನೇ ಡೋಸ್ ಎಲ್ಲಿ ಮತ್ತು ಯಾವಾಗ ನೀಡಲಾಗುವುದೆಂದು ತಿಳಿಸುವಂತೆ ಕೋರಿದರು.

**ಸದರಿ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳು ಈ ಕೆಳಕಂಡಂತೆ ಪ್ರತಿಕ್ರಿಯಿಸಿದರು.**

ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ದಾಖಲಾಗಿರುವ ದೂರುಗಳನ್ನು ಹಿರಿಯ ಆರೋಗ್ಯಾಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಲು ಕ್ರಮ ವಹಿಸಲಾಗುವುದೆಂದು ನೋಡಲ್ ಅಧಿಕಾರಿಗಳು ತಿಳಿಸಿದರು.

ಕೆಂಪೇಗೌಡ ಜೋಡಿ ರಸ್ತೆಯ ಚರಂಡಿಯಲ್ಲಿ ತುಂಬಿಕೊಂಡಿರುವ ಹೂಳನ್ನು ಸಿಲ್ಟ್ & ಟ್ರಾಕ್ಟರ್ ಕಾಮಗಾರಿಯಡಿಯಲ್ಲಿ ಆದ್ಯತೆಯ ಮೇರೆಗೆ ಡೆಬ್ರಿಸ್ ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ವಾರ್ಡ್ ಅಭಿಯಂತರರು ತಿಳಿಸಿದರು.

ಕೋವಿಡ್ ಲಸಿಕೆ 2ನೇ ಡೋಸ್ ಸದ್ಯಕ್ಕೆ ಕೊರೋನಾ ಮುಂಚೂಣಿ ಕಾರ್ಯಕರ್ತರಿಗೆ ಮಾತ್ರ ನೀಡಲಾಗುತ್ತಿದ್ದು, 18 ವರ್ಷ ಮೇಲ್ಪಟ್ಟವರಿಗೆ ಲಸಿಕೆಯ ಲಭ್ಯತೆಗನುಗುಣವಾಗಿ ಮುಂದಿನ ದಿನಗಳಲ್ಲಿ ನೀಡಲಾಗುವುದೆಂದು ಡಾ॥ ಪುಷ್ಪಲತಾ, ವೈದ್ಯಾಧಿಕಾರಿಗಳು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಬಂಗಾರಪ್ಪ ನಗರ ರವರು ತಿಳಿಸಿದರು.

ಬೆಸ್ಕಾಂ ಇಲಾಖೆಯ ವತಿಯಿಂದ, ಮರಕ್ಕೆ ತಗುಲುವ ಸಂಭವವಿರುವ ವಿದ್ಯುತ್ ಲೈನ್ ಕೆಳಗಿರುವ ಮರದ ರೆಂಬೆಗಳನ್ನು ತೆರವುಗೊಳಿಸಿದ ನಂತರ ಸರಿಯಾಗಿ ವಿಲೇವಾರಿ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಕೋರಲಾಗುವುದೆಂದು ವಾರ್ಡ್ ಅಭಿಯಂತರರು ತಿಳಿಸಿದರು.

- ಕೆಂಚೇನಹಳ್ಳಿ ನಿವಾಸಿಯಾದ ಶ್ರೀ ಸುರೇಶ ರಾವ್ ರವರು ಕೆಂಚೇನಹಳ್ಳಿ ಗ್ರಾಮದ ರಸ್ತೆ ಮತ್ತು ಚರಂಡಿ ಅಭಿವೃದ್ಧಿಪಡಿಸಲು ಹಾಗೂ ತಮ್ಮ ಪ್ರದೇಶದಲ್ಲಿ ಸೊಳ್ಳೆ ಔಷಧ ಸಿಂಪಡಿಸಲು ಕೋರಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಸದರಿ ಕಾಮಗಾರಿಯ ಮರು ಟೆಂಡರ್ ಕರೆದು ಕಾರ್ಯಾದೇಶ ದೊರೆತ ನಂತರ ಅಭಿವೃದ್ಧಿಪಡಿಸಲಾಗುವುದೆಂದು ತಿಳಿಸಿದರು. ಹಾಗೂ ಸೊಳ್ಳೆ ಔಷಧ ಸಿಂಪಡಿಸಲು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಕೋರಲಾಗುವುದೆಂದು ತಿಳಿಸಿದರು.
- ಸಪ್ತಗಿರಿ ಬಡಾವಣೆಯ ನಿವಾಸಿಯಾದ ಶ್ರೀಮತಿ ಪ್ರತಿಮಾರಾವ್ ರವರು ಸಪ್ತಗಿರಿ ಬಡಾವಣೆಯಲ್ಲಿ ಪೌರ ಕಾರ್ಮಿಕರು ಹಾಗೂ ಸಿಲ್ಪ್ & ಟ್ರಾಕ್ಟರ್ ಕಾರ್ಮಿಕರಿಂದ ತಮ್ಮ ಪ್ರದೇಶ ವ್ಯಾಪ್ತಿಯ ರಸ್ತೆ ಬದಿಯ ಕಸ ತೆರವುಗೊಳಿಸಲು "ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ" ಹಮ್ಮಿಕೊಂಡು ತೆರವುಗೊಳಿಸಲು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಪ್ರಸ್ತುತ ಮಳೆಹಾನಿ ದೂರುಗಳನ್ನು ಪರಿಹರಿಸುತ್ತಿದ್ದು, ಒಂದು ವಾರದೊಳಗಾಗಿ ರಸ್ತೆ ಬದಿಯ ಕಸ ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.
- ಸಪ್ತಗಿರಿ ಬಡಾವಣೆಯಲ್ಲಿ ಬೀದಿ ಬದಿ ವಿದ್ಯುತ್ ಕಂಬದಲ್ಲಿ ಜೇನು ಗೂಡು ಕಟ್ಟಿದ್ದು ತೆರವುಗೊಳಿಸುವಂತೆ ಪ್ರತಿಮಾ ರವರು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಪರಿಶೀಲಿಸಿ ತುರ್ತಾಗಿ ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ತಾಂತ್ರಿಕ ಸಮಸ್ಯೆಯಿಂದ Zoom Meeting ನಲ್ಲಿ ಸರಿಯಾಗಿ ಧ್ವನಿ ಕೇಳಿಸದ ಕಾರಣ, ಮುಂದಿನ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ಭೌತಿಕ (Offline) ಸಭೆ ಏರ್ಪಡಿಸಲು ತೀರ್ಮಾನಿಸಲಾಯಿತು.

| | |
|---|---|
| ಸದಸ್ಯ ಕಾರ್ಯದರ್ಶಿಗಳು ವಾರ್ಡ್ DETER ಸಮಿತಿ | ನೋಡಲ್ ಅಧಿಕಾರಿಗಳು ವಾರ್ಡ್ DETER ಸಮಿತಿ |
| ವಾರ್ಡ್ ಸಂಖ್ಯೆ-160 | 29/7 ವಾರ್ಡ್ ಸಂಖ್ಯೆ-160 |

**ಪ್ರತಿಯನ್ನು:-**

1. ಮಾನ್ಯ ವಲಯ ಆಯುಕ್ತರು, ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು, ರಾರಾನಗರ, ವಲಯ ರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.